# ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿ/ಸಿಬ್ಬಂದಿ-1/MHRD/2009-3ನೇ ನವೀಕರಣ/2011-12

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560 012.
ದಿನಾಂಕ: 22-10-2013.

## ನೋಟೀಸ್

ವಿಷಯ: 2009ನೇ ಸಾಲಿನಲ್ಲಿ MHRD ವಿದ್ಯಾರ್ಥಿ ವೇತನಕ್ಕೆ ಆಯ್ಕೆಯಾಗಿದ್ದು ಮೊದಲ ವರ್ಷದ / ಪ್ರಥಮ/ದ್ವಿತೀಯ/ತೃತೀಯ ನವೀಕರಣಕ್ಕೆ ನಿಗಧಿತ ಅರ್ಜಿ/ಅಗತ್ಯ ಮಾಹಿತಿ /ದಾಖಲೆಗಳನ್ನು ನೀಡದ ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವ ಕುರಿತು.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಾವು 2009ನೇ ಸಾಲಿನಲ್ಲಿ MHRD ವಿದ್ಯಾರ್ಥಿ ವೇತನಕ್ಕೆ ಆಯ್ಕೆಯಾಗಿರುತ್ತೀರಿ. ತಾವು ಮೊದಲ ವರ್ಷದ / ಪ್ರಥಮ/ದ್ವಿತೀಯ/ತೃತೀಯ ನವೀಕರಣಕ್ಕೆ ಸಲ್ಲಿಸಿರುವ ಅರ್ಜಿ/ದಾಖಲೆಗಳನ್ನು ಪರಿಶೀಲಿಸಲಾಗಿದೆ. ಈಗಾಗಲೇ ತಮಗೆ ಇಲಾಖಾ ವತಿಯಿಂದ ಸಾಕಷ್ಟು ಕಾಲಾವಕಾಶವನ್ನು ನೀಡಿದ್ದಾಗ್ಯೂ ಕೂಡ ಅಗತ್ಯ ನಿಗಧಿತ ದಾಖಲೆಗಳನ್ನು / ಮಾಹಿತಿಗಳನ್ನು ಇದುವರೆಗೂ ಒದಗಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಈಗ ತಮಗೆ ನಿಗಧಿತ ಅರ್ಜಿ/ ಅಗತ್ಯ ದಾಖಲೆ/ಮಾಹಿತಿಗಳನ್ನು ಒದಗಿಸಲು **ದಿನಾಂಕ:16-11-2013** ರವರೆಗೆ ಅಂತಿಮ ಅವಕಾಶವನ್ನು ನೀಡಿದೆ. **ದಿನಾಂಕ:16-11-2013**ರೊಳಗಾಗಿ ತಮ್ಮಿಂದ ನಿಗಧಿತ ಅರ್ಜಿ / ಅಗತ್ಯ ದಾಖಲೆ / ಮಾಹಿತಿಗಳು ಬಾರದೇ ಇದ್ದಲ್ಲಿ ಇಲಾಖಾ ವತಿಯಿಂದ ಯಾವುದೇ ಸೂಚನೆಯನ್ನೂ ನೀಡದೇ ತಾವು ಪ್ರಥಮ / ದ್ವಿತೀಯ / ತೃತೀಯ ನವೀಕರಣ/ನವೀಕರಣಗಳನ್ನು ಪಡೆಯಲು ಅನರ್ಹಗೊಂಡಿರುವುದಾಗಿ ಏಕಪಕ್ಷೀಯವಾಗಿ ನಿರ್ಣಯಿಸಿ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು. ತದನಂತರ ಬಂದಂತಹ ಯಾವುದೇ ದಾಖಲೆ/ಮಾಹಿತಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಅರ್ಜಿ ಸಲ್ಲಿಸದ/ಅಗತ್ಯ ದಾಖಲೆ/ಮಾಹಿತಿ ಸರಿಯಿರದ ವಿದ್ಯಾರ್ಥಿಗಳ ಪಟ್ಟಿಯನ್ನು ಇಲಾಖೆಯ ವೆಬ್‌ಸೈಟ್ **http://pue.kar.nic.in =» Scholarship =» MHRD Scholarship =» MHRD Scholarship 2009 Batch**ನಲ್ಲಿ ಅಳವಡಿಸಿದೆ. ತಮ್ಮ ಹೆಸರಿನ ಮುಂದೆ ನಮೂದಿಸಿರುವ ನ್ಯೂನತೆಯನ್ನು ತಿಳಿದುಕೊಂಡು **ದಿನಾಂಕ:16-11-2013**ರೊಳಗಾಗಿ ನಿಗಧಿತ ಅರ್ಜಿ / ಅಗತ್ಯ ದಾಖಲೆ / ಮಾಹಿತಿಗಳನ್ನು ಲಕೋಟೆಯ ಮೇಲೆ **MHRD SCHOLARSHIP 2009 Batch – INFORMATIONS** ಎಂದು ನಮೂದಿಸಿ, ಈ ಕೆಳಕಾಣಿಸಿದ ವಿಳಾಸಕ್ಕೆ ಕಳುಹಿಸಲು ಈ ಮೂಲಕ ತಮಗೆ ಸೂಚಿಸಿದೆ.

**Joint Director(Admn.,),**
**Dept. of Pre-University Education,**
**18th Cross, Malleshwaram,**
**Bangalore-560 012.**
**Telephone No.080-23361856/857/858**

ಜಂಟಿ ನಿರ್ದೇಶಕರು(ಆಡಳಿತ),
ಪದವಿ ಪೂರ್ವ ಶಿಕ್ಷಣ ಇಲಾಖೆ.

----------------------------
----------------------------
----------------------------
----------------------------